# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.353-2014** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರವೀಶ್ ಎಂ<br>ಹೆಮ್ಮರಗಾಲ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 18-01-2024.** |

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಟಿ.ಎಂ.ಆರ್ ವಕೀಲರಿಂದಃ**

ನನ್ನ ಮತ್ತು ಪ್ರತಿವಾದಿಯವರ ನಡುವಿನ ಹಣದ ಭದ್ರತೆಗಾಗಿ ಪ್ರತಿವಾದಿಯವರು ಆನ್ ಡಿಮ್ಯಾಂಡ್ ಪ್ರನೋಟ್ ಅನ್ನು ನೀಡಿದ್ದರು. ಪ್ರತಿವಾದಿಯವರು ನನಗೆ ಆನ್ ಡಿಮ್ಯಾಂಡ್ ಪ್ರನೋಟ್ ಅನ್ನು ಬರೆದುಕೊಟ್ಟ ದಿನಾಂಕ ಈಗ ನನಗೆ ನೆನಪಿಲ್ಲ, ಆದರೆ ಅವರು ಬರೆದುಕೊಟ್ಟು ಸುಮಾರು 12 ವರ್ಷಗಳಾಗಿರುತ್ತವೆ ಎಂದು ನುಡಿಯುತ್ತಾರೆ. ನಿಪಿ-1 ಅನ್ನು ನಂಜನಗೂಡಿನ ತಾಲ್ಲೂಕು ಕಚೇರಿಯ ಮುಂಭಾಗ ಬರೆಯಲಾಗಿರುತ್ತದೆ. ನಿಪಿ-1 ಅನ್ನು ಬರೆದುಕೊಟ್ಟ ಸಮಯ ಸಮಯ ನಾನು, ಪ್ರತಿವಾದಿ, ಮೀನಾ ಮತ್ತು ಮಹದೇಶೆಟ್ಟಿ ರವರು ಇದ್ದೆವು. ಪ್ರತಿವಾದಿಯೂ ನನ್ನಿಂದ ರೂ.1,50,000/- ಗಳನ್ನು ಪಡೆದುಕೊಂಡಿರುತ್ತಾರೆ. ನಿಪಿ-1 ಅನ್ನು ಬರೆಯಲು ನಾನೇ ಮಾಹಿತಿ ನೀಡಿರುತ್ತೇನೆ. ನಿಪಿ-1 ಅನ್ನು ಲೋಕೇಶ್ ರವರು ಬರೆದಿರುತ್ತಾರೆ. ಪ್ರತಿವಾದಿ ನನ್ನಿಂದ ಪಡೆದಿದ್ದ ರೂ.1,00,000/- ಗಳಿಗೆ ಮಾಹೇಯಾನ ಶೇಕಡ 1.40 ರಂತೆ ಬಡ್ಡಿಯನ್ನು ಪಾವತಿಸಲು ಒಪ್ಪಿಕೊಂಡಿದ್ದರು. ನಿಪಿ-1 ಕ್ಕೂ ಪ್ರತಿವಾದಿಯವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ನನ್ನ ಮತ್ತು ಪ್ರತಿವಾದಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ, ನಾನು ಪ್ರತಿವಾದಿಗೆ ಹಣವನ್ನು ಸಾಲವಾಗಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಮೂದಿಸಲಾಗಿರುವ ಹಣದ ವ್ಯವಹಾರವು ನನಗೂ ಮತ್ತು ಮೀನಾ ರವರಿಗೂ ನಡೆದ ವ್ಯವಹಾರ ವಾಗಿರುತ್ತದೆಯೇ ಹೊರತು ನನ್ನ ಮತ್ತು ಪ್ರತಿವಾದಿಯವರ ನಡುವೆ ಆದ ವ್ಯವಹಾರವಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ರವರಿಗೆ ರೂ.1,00,000/- ಗಳನ್ನು ಸಾಲವಾಗಿ ನೀಡಿರುತ್ತೇನೆ

ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನನಗೆ ಮಾಹೇಯಾನ ಶೇಕಡ ರೂ.1.40 ರಂತೆ ಬಡ್ಡಿಯನ್ನು ಕೊಡಲು ಒಪ್ಪಿರಲಿಲ್ಲ ಎಂದರೆ ಸರಿಯಲ್ಲ.

2. ಈ ದಾವಾದಲ್ಲಿ ನಮೂದಾಗಿರುವ ಹಣದ ವ್ಯವಹಾರವನ್ನು ಹೊರತುಪಡಿಸಿ ನನ್ನ ಮತ್ತು ಪ್ರತಿವಾದಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರಲಿಲ್ಲ. ಈ ದಾವಾದಲ್ಲಿ ನಮೂದಿಸಿರುವ ಹಣ ವ್ಯವಹಾರವೇ ನನ್ನ ಮತ್ತು ಪ್ರತಿವಾದಿಯ ನಡುವೆ ನಡೆದ ಮೊದಲ ಹಣ ವ್ಯವಹಾರವಾಗಿರುತ್ತದೆ. ನಿಪಿ-1 ಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವ ಮೀನಾ ಮತ್ತು ನನ್ನ ನಡುವೆ ನಡೆದ ವ್ಯವಹಾರವನ್ನು, ನನ್ನ ಮತ್ತು ಪ್ರತಿವಾದಿ ನಡುವೆ ನಡೆದಿದೆ ಎಂದು ತೋರಿಸಿ ಈ ದಾವಾವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ರೂ.1,00,000/- ಗಳನ್ನು ಒಂದೇ ಗಂಟಿನಲ್ಲಿ ನೀಡಿರುತ್ತೇನೆ. ನಾನು ರೂ.500/- ಮುಖ ಬೆಲೆಯ ನೋಟುಗಳನ್ನು ಪ್ರತಿವಾದಿ ನೀಡಿರುತ್ತೇನೆ. ಪ್ರತಿವಾದಿಯ ಅವರ ಮನೆಯ ಖರ್ಚಿಗೆ ಹಾಗೂ ಪ್ರತಿವಾದಿಯ ತಮ್ಮನ ಮಗಳ ತೊಟ್ಟಿಲ ಶಾಸ್ತ್ರಕ್ಕಾಗಿ ನನ್ನಿಂದ ಸಾಲವಾಗಿ ಹಣ ಪಡೆದಿರುತ್ತಾರೆ. ನಾನು ಹೇಳುವಂತೆ ನನ್ನ ಮತ್ತು ಪ್ರತಿವಾದಿ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆಯದೇ ಇದ್ದರೂ ಸಹ ಹಣಕಾಸಿನ ವ್ಯವಹಾರ ನಡೆದಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರ ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**